ಶ್ರೀ ಕೆ. ಶಿವಮೂರ್ತಿ.—ಬೆಂಗಳೂರು ನಗರದ ಕಬ್ಬನ್ ಪೇಟೆಯ ರಿಕ್ರಿಯೇಷನ್ ಕ್ಲಬ್ ಮೇಲೆ ಪೋಲೀಸರು ದಾಳಿ ನಡೆಸಿ ೯ ಜನರನ್ನು ಬಂಧಿಸಿದ್ದಾರೆ. ಈ ವಿಚಾರ ಮುಂಜಾನೆ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಅಲ್ಲಿನ ಕ್ಲಬ್ ನಡೆಸುತ್ತಿರುವುದು ಪರ್ತಕರ ಹೆಸರಿನಲ್ಲಿ. ಆದರೆ ನಿಜವಾಗಿ ಕ್ಲಬ್ಬಿನ ಅಧ್ಯಕ್ಷರು ಆಳುವ ಪಕ್ಷದ ಅತ್ಯಂತ ವರ್ಚಸ್ಸಿನ ರಾಜಕಾರಣಿ ಎನ್ನಲಾಗಿದೆ.

ಅಧ್ಯಕ್ಷರು.—ಪ್ರತಿಯೊಂದು ವಿಚಾರಕ್ಕೂ ರಾಜಕಾರಣ ತರಬೇಡಿ.

ಶ್ರೀ ಕೆ. ಶಿವಮೂರ್ತಿ.—ದಾಳಿ ಮಾಡಿದಾಗ ಒಬ್ಬರು ಮಹಾನಗರಪಾಲಿಕೆಯ ಜನತಾ ಪಕ್ಷದ ಸದಸ್ಯರು ಸಿಕ್ಕಿದ್ದಾರೆ. ಬಂಧಿತರನ್ನು ಹಿಡಿದು ೪೫೬೧ ರೂಪಾಯಿ ಕ್ಯಾಷ್, ೪,೫೦೦ ರೂಪಾಯಿ ಮೊತ್ತದ ಟೋಕನ್, ಅಶ್ಲೀಲ ಸಾಹಿತ್ಯದ ಟೇಪ್ ರೆಕಾರ್ಡರ್, ಬ್ಲೂ ಫಿಲಂ, ವಿದೇಶಿ ಮದ್ಯದ ಬಾಟಲ್‌ಗಳು ಇವುಗಳನ್ನೆಲ್ಲಾ ವಶಪಡಿಸಿಕೊಂಡಿದ್ದಾರೆ. ಒಬ್ಬರು ಕ್ಯಾಬಿನೇಟ್ ದರ್ಜೆ ಮಂತ್ರಿಗಳು ಫೋನ್ ಮಾಡಿ ಕೇಸ್ ಹಾಕಬೇಡಿ, ಬಿಟ್ಟುಬಿಡಿ ಎಂದು ಹೇಳಿದ್ದಾರೆ.

ಅಧ್ಯಕ್ಷರು.—ಹಿಡಿದಿದ್ದಾರಲ್ಲ, ಅದಕ್ಕೆ ಸಂತೋಷಪಡಿ. ಉತ್ತರ ಏತಕ್ಕೆ ?

ಶ್ರೀ ಕೆ. ಶಿವಮೂರ್ತಿ.—ಕ್ಲಬ್ಬನ್ನು ನಡೆಸುತ್ತಿರುವವರು ಯಾರು ಮತ್ತು ಅದಕ್ಕೆ ಪ್ರೋತ್ಸಾಹ ನೀಡುತ್ತಿರುವವರು ಯಾರು ಎಂಬುದನ್ನು ನೋಡಬೇಕು. ಜನತಾ ಪಕ್ಷದ ಸದಸ್ಯರು ನಗರಪಾಲಿಕೆಯಲ್ಲಿದ್ದಾರೆ.

ಅಧ್ಯಕ್ಷರು.—ನೀವು ನೋಟೀಸ್‌ನಲ್ಲಿ ಅದನ್ನು ಹೇಳಿಲ್ಲ. ನೋಟೀಸ್‌ನಲ್ಲಿ ಹೇಳಿರುವುದನ್ನು ಮಾತ್ರ ಹೇಳಿ.

ಶ್ರೀ ಕೆ. ಶಿವಮೂರ್ತಿ.—ಮುಂಜಾನೆ ಪತ್ರಿಕೆಯಲ್ಲಿ ಬಂದಿದೆ. ಒತ್ತಾಯ ತಂದಿರುವ ಕ್ಯಾಬಿನೆಟ್ ದರ್ಜೆ ಸಚಿವರು ಯಾರು ? ಕ್ಲಬ್ ನಡೆಸುತ್ತಿರುವವರು ಯಾರು ? ಬ್ಲೂ ಫಿಲಂ, ಅಶ್ಲೀಲ ಸಾಹಿತ್ಯದ ಟೇಪ್‌ರೆಕಾರ್ಡರ್, ವಿದೇಶಿ ಮದ್ಯದ ಬಾಟಲ್‌ಗಳು ಎಲ್ಲಿ ಹೋಯಿತು ? ಸರ್ಕಾರ ಇದರ ಬಗ್ಗೆ ವಿವರ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ವಿ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಈಗ ವಿಷಯ ಹೇಳಿದ್ದಾರೆ. ನಾನು ಪೋಲೀಸರಿಂದ ವರದಿ ತರಿಸುತ್ತೇನೆ. ನಂತರ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

(vii) Incident took place at Hosur Border due to language issue

ಶ್ರೀ ಎಂ. ವೀರಪ್ಪ ಮೊಯಿಲಿ.— (ಮಾನ್ಯ ವಿರೋಧ ಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೆ.. ...

Mr. SPEAKER.—Trafic has been cleared ಎಂದು ಬಂದಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಿನ್ನೆ ಹೊಸೂರು ಗಡಿಯಲ್ಲಿ ಏನು ಕೆಲವು ಘಟನೆಗಳು ನಡೆದಿವೆ ಅಂಥ ಘಟನೆಗಳು ಯಾವತ್ತೂ ನಮ್ಮ ಕರ್ನಾಟಕ ಅಥವಾ ದಕ್ಷಿಣ ಭಾರತದಲ್ಲಿ ನಡೆದಿಲ್ಲ. ಸುಮಾರು ಮುಂದಿ.....

Mr. SPEAKER.—If peace is restorted, does it warrant discussion ?

SRI. M. VEERAPPA MOILY.—Acrding to the information which came to me, tension is still prevailing. ಏತಕೆಂದರೆ ಈ ವಿಚಾರ ತಮಿಳು ನಾಡು ಅಸೆಂಬ್ಲಿಯಲ್ಲಿ ಕೂಡ ಬಂದಿದೆ. ಈಗ ಏನಾಗಿದೆಯೆಂದರೆ ಪರಸ್ಪರ ಎರಡು ರಾಜ್ಯಗಳ ಮಧ್ಯೆ ಒಂದು ರೀತಿಯ ಸಂಶಯ ಭಾವನೆಗಳ ಬಗ್ಗೆ ಏರ್ಪಟ್ಟಿದೆ. ನಗರದಲ್ಲಿ ಒಂದು ಕಾರನ್ನು ಕೂಡ wap laid ಮಾಡಿದ್ದಾರೆ. ೬೦ ಲಾರಿಗಳನ್ನು ಡ್ಯಾಮೇಜ್ ಮಾಡಿದ್ದಾರೆ ಎಂದು ವರದಿ ಇದೆ. ನಾನು ಇದರ ಬಗ್ಗೆ ವಿಸ್ತಾರವಾಗಿ ಹೇಳುವುದಿಲ್ಲ. ಸರ್ಕಾರಕ್ಕೆ ಸಲಹೆ ಕೊಡುವುದೇನೆಂದರೆ ನಾವು

ಈ ವಿಷಯದಲ್ಲಿ ಸದನದಲ್ಲಿ ಮಾತನಾಡುವುದನ್ನು ಬಿಟ್ಟುಬಿಡೋಣ. ನಾನು ಹಿಂದೆಯೂ ಇದನ್ನೇ ಹೇಳಿದ್ದೇನೆ. ಈ ಸದನದಲ್ಲಿ ಭಾಷೆಯ ಬಗ್ಗೆ, ಭಾಷಾ ಗೊಂದಲದ ಬಗ್ಗೆ ಮಾತನಾಡುವುದನ್ನು ಬಿಡುವುದು ಒಳ್ಳೆಯದು. ನಾನು ಮತ್ತೊಂದು ಸೂಚನೆ ಕೊಡುತ್ತೇನೆ. ಹಿಂದೆಯೂ ಇದನ್ನು ಕೊಟ್ಟಿದ್ದೇನೆ. ಸೋಮವಾರ ಅಥವಾ ಮಂಗಳವಾರ ಸನ್ಮಾನ್ಯ ಮುಖ್ಯ ಮಂತ್ರಿಗಳು ವಿರೋಧ ಪಕ್ಷದ ನಾಯಕರನ್ನು, ಭಾಷಾ ಪಂಡಿತರನ್ನು, ಅಲ್ಪಸಂಖ್ಯಾತರ ಪ್ರತಿನಿಧಿಗಳನ್ನು, ಕನ್ನಡ ಭಾಷೆಯಲ್ಲಿ ಪರಿಣತಿ ಯುಳ್ಳವರನ್ನು ಮತ್ತು ಚಳುವಳಿಯಲ್ಲಿರುವವರನ್ನು ಜರೂರಾಗಿ ಕರೆದು ಪರಸ್ಪರ ಚರ್ಚೆ ಮಾಡಬೇಕು. ಈ ವಿಷಯದಲ್ಲಿ ತಡಮಾಡಬಾರದು. ಸಾಧ್ಯವಾದರೆ ಸೋಮವಾರ ಅಥವಾ ಮಂಗಳವಾರ ಸಭೆ ಕರೆದು ಚರ್ಚೆ ನಡೆಸುವುದಲ್ಲದೆ ತಮಿಳುನಾಡಿನ ಎಂ. ಜಿ. ಆರ್. ಅವರನ್ನು ಮತ್ತು ಇತರ ಪ್ರತಿನಿಧಿಗಳನ್ನು ಪ್ರತ್ಯೇಕವಾಗಿ ಕರೆಸಿ ಇದರಲ್ಲಿರತಕ್ಕ ಎಲ್ಲ ಸಂಶಯಗಳನ್ನು, ಸಂದೇಹಗಳನ್ನು ನಿವಾರಿಸಿ ಪುಕಾರುಗಳು ಹರಡುವುದನ್ನು ತಡೆಹಿಡಿಯಬೇಕಾದ ಅವಶ್ಯಕತೆ ಇದೆ. ಸರ್ಕಾರದವರು ಈ ಕೆಲಸವನ್ನು ಸೋಮವಾರ ಅಥವಾ ಮಂಗಳವಾರ ಮಯಮಾಡಿ ಮಾಡಬೇಕು. ಎಲ್ಲರನ್ನೂ ಕರೆದು across the table ಚರ್ಚೆ ಮಾಡುವುದು ಅಗತ್ಯ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಇದು ಒಳ್ಳೆಯ ಸಲಹೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಆದಷ್ಟು ಜಾಗ್ರತೆ ಚರ್ಚೆ ಮಾಡಿ ದುಷ್ಟ ಪರಂಪರೆಯನ್ನು ತಕ್ಷಣ ನಿಲ್ಲಿಸಬೇಕು ಎಂದು ಪಾರ್ಥನೆ ಮಾಡಿಕೊಳ್ಳುತ್ತೇನೆ.

ಡಾ|| ವಿ. ಎಸ್. ಆಚಾರ್ಯ.—ಆ ರಾಜ್ಯದ ಮುಖ್ಯ ಕಾರ್ಯದರ್ಶಿಯವರೂ ಇದರಲ್ಲಿ ಭಾಗವಹಿಸಲಿ.

SRI. M. VEERAPPA MOILY.—It is not that the Tamils hate Kannadigas and the Kannadigas hate the Tamils. But this is a very important matter.

ಈ ಬಗ್ಗೆ ನಾನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ. ಆ ವಿಚಾರದ ಬಗ್ಗೆ ಸೋಮವಾರ ಅಥವಾ ಮಂಗಳವಾರ ಯೋಚನೆ ಮಾಡಬೇಕಾಗುತ್ತದೆ. ಕಾರಣ ಈಗ ಮುಖ್ಯ ಮಂತ್ರಿಯವರು ಊರಿನಲ್ಲಿ ಇಲ್ಲ. ಅವರು ಬಂದಮೇಲೆ ಖಂಡಿತ ಮಾನ್ಯ ಮೊಯ್ಲಿಯವರನ್ನು ಈ ಬಗ್ಗೆ ಸಂಪರ್ಕಿಸಿ ಏನು ಯೋಚನೆ ಮಾಡಬೇಕು ಎಂಬ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಎನ್. ಜಿ. ನಾಯಕ್.—ಸದನ ನಡೆಯುವಾಗ ಮುಖ್ಯಮಂತ್ರಿಗಳು ಸದನದಲ್ಲಿ ಇರಬೇಕಾಗುತ್ತದೆ.

ಅಧ್ಯಕ್ಷರು.—ಈ ರೀತಿ ಮಾನ್ಯ ಸದಸ್ಯರು ಹೇಳುವುದು ಸರಿಯಲ್ಲ. ನಿಮ್ಮ ವಿರೋಧ ಪಕ್ಷದ ನಾಯಕರು ಸದನದಲ್ಲಿ ಇಲ್ಲ ಎಂದರೆ ಸಭೆ ನಡೆಸಲು ಆಗುವುದಿಲ್ಲವೇ ? ಸದಸ್ಯರು ಮಾತನಾಡುವಾಗ ಸ್ವಲ್ಪ ಯೋಚನೆ ಮಾಡಿ ಮಾತನಾಡಬೇಕಾಗುತ್ತದೆ.

(xii) ಮಡಕೇರಿ ಪುರಸಭೆ ವ್ಯಾಪ್ತಿಗೆ ಸೇರಿರುವ ಜಾಗದಲ್ಲಿ ರಸ್ತೆ ಮಧ್ಯದಲ್ಲಿ ದೊಡ್ಡ ಟ್ರಂಚನ್ನು ಹೊಡೆದು ರಸ್ತೆಯನ್ನು ಬ್ಲಾಕ್ ಮಾಡಿರುವುದರಿಂದ ತೊಂದರೆ ಉಂಟಾಗಿರುವ ಬಗ್ಗೆ

ಶ್ರೀ ಎಂ. ಎಂ. ನಾಣಯ್ಯ.—ಅಧ್ಯಕ್ಷರೇ, ಕೊಡಗು ಜಿಲ್ಲೆ ಮಡಕೇರಿ ಪುರಸಭೆ ವ್ಯಾಪ್ತಿಗೆ ಬರುವ ಮ್ಯಾನ್ಸ್ಸ್ ಕಾಂಪೌಂಡ್ ಎಂಬ ಜಾಗದ ಬಳಿಯಲ್ಲಿ ಕನ್ನಡ ಬಾನೆ ಎಂಬ ಜಾಗದಲ್ಲಿ ಸುಮಾರು ೩೦೦ ಕುಟುಂಬಗಳು ಅನೇಕ ವರ್ಷದಿಂದ ವಾಸ ಮಾಡುತ್ತಿವೆ. ಈ ಕನ್ನಡ ಬಾನೆ ಎಂಬ ಜಾಗದ ಬಳಿ ಮಡಿಕೇರಿ ಟೌನ್ ಮುನಿಸಿಪಲ್ ಕೌನ್ಸಿಲ್ ಲಿಮಿಟ್‌ಗೆ ಸೇರಿರುವ ಜಾಗದಲ್ಲಿ ರಸ್ತೆ ಮಧ್ಯೆ ದೊಡ್ಡ ಟ್ರಂಚನ್ನು ಹೊಡೆದು ರಸ್ತೆಯನ್ನು ಬ್ಲಾಕ್ ಮಾಡಿರುತ್ತಾರೆ. ಹಾಗೂ ಆ ಜಾಗ ಪ್ರೈವೇಟ್ ಪಾಪರ್ಟಿಗೆ ಸೇರಿದ್ದು ಎಂದು ಹೇಳುತ್ತಿದ್ದಾರೆ. ಹೀಗಾಗಿ ಅಲ್ಲಿ ಅನೇಕ ವಾಹನಗಳು ದಾರಿತಪ್ಪಿ